ಕೂಗು ಬೈಗುಳ ನಿರಂತರವಾಗಿ ನಡೆಯುತ್ತಿದ್ದುವು.

'ಸಾರ್ ಇವತ್ತು ಇಸ್ಕೂಲ್...' ಮೇಷ್ಟರ ಬಳಿಗೆ ಬಂದ ಹುಡುಗರಲ್ಲಿ ಒಬ್ಬ ಅಳುಕುತ್ತ ಅಳುಕುತ್ತ ಕೇಳಿದ.

'ರಜ, ಇವತ್ತಿನ ಪಾಠ ಇಲ್ಲೇ ಇದೆ ನೋಡಿ, ಕಳ್ಳತನ ಮಾಡಿದರೆ ಏನೇನಾಗುತ್ತೆ ಅನ್ನೋದು' ಮೇಷ್ಟರು ಗತ್ತಿನಿಂದ ಮೂಗನ ಕಡೆಗೆ ಬೆರಳು ತೋರಿಸುತ್ತ ಹೇಳಿದರು.

'ರಜ...' 'ರಜಾ!...' 'ಇವತ್ತು ಇಸ್ಕೂಲ್ಗೆ ರಜಾ!' 'ಇಲ್ಲೇ ಪಾಟವಂತೆ, ಕಳ್ಳತನದ್ದೂ!' ಹುಡುಗರೆಲ್ಲ ಕೂಗಾಡುತ್ತ ಕುಣಿದಾಡಿದರು.

ಗ್ರಾಮ ಪ್ರಮುಖರ ಮುಖಂಡತ್ವದಲ್ಲಿ ಮೂಗನ ಮೆರವಣಿಗೆ ದೇವಸ್ಥಾನದಿಂದ ಹೊರಟಿತು. ಗಾಡಿಯ ಅಕ್ಕಪಕ್ಕದಲ್ಲಿ, ಹಿಂದೆ, ಜನ ಸಂದಣಿ ಸಾಗುತ್ತಿತ್ತು. ಹುಡುಗರು ಮಕ್ಕಳು ಎಲ್ಲೆಲ್ಲೂ ಸುಳಿದಾಡುತ್ತಿದ್ದರು. ಊರಿನ ದನ ಕುರಿ ಆಡು ನಾಯಿ ಹಂದಿಗಳು, ಮೋಜುಗಾರರು ಮೆರವಣಿಗೆಗೆ ಸೇರಿಸಿದ ಕತ್ತೆಗಳೂ, ಜನರ ಜತೆಯಾಗಿ. ಮೆರವಣಿಗೆಗೆ ಸೇರದಿದ್ದವರು ಮನೆ ಜಗಲಿಗಳ ಮೇಲೆ ನಿಂತು ನೋಡಿದರು; ಅಲ್ಲಿಂದಲೇ ಹೀನಾಮಾನ ಬೈದರು. ಕ್ಯಾಕರಿಸಿ ಉಗುಳಿದರು, ಸೊಂಟದ ಮಕ್ಕಳಿಗೆ, ಮೇಲೆತ್ತಿ ಹಿಡಿದ ಮಕ್ಕಳಿಗೆ ಬೆರಳು ಮಾಡಿ ಮೂಗನನ್ನು ತೋರಿಸಿದರು. 'ನೋಡಲ್ಲಿ ಕಳ್ಳನ್ನ! ಗಾಡಿಮ್ಯಾಲೆ ನಿಂತವನಲ್ಲಾ ಸೂಳೆಮಗ, ಅವ್ನು, ಹೆಂಗವ್ನೆ ನೋಡು, ತಲೆ ಬೋಳಸ್ಕಂಡೂ, ಮಸಿ ಬಳ್ಕಂಡೂ, ಎಕ್ಕದ್‌ಸರ ಹಾಕ್ಕಂಡೂ, ಚಿಂದಿ ಅರ್ವೆಸುತ್ಕಂಡೂ, ಕಾಣಿಸ್ತಾ ಮರಿ? ಥೂ ಅನ್ನು, ಪಾಪಿ ನನ್ ಮಗನ್ನ ಛೀಮಾರಿ ಹಾಕು' ಎನ್ನುತ್ತಿದ್ದರು.

'ಕಳ್ಳಲೌಡಿ ಮಗಂಗೆ!...' ಒಬ್ಬ ಜೋರಾಗಿ ಕೂಗುತ್ತಿದ್ದ.

'ನೇಣು ನೇಣು!' ಜನರು ಉತ್ತರ ಕೂಗುತ್ತಿದ್ದರು.

'ಪಾಪಿ ಮುಂಡೇಗಂಡಂಗೆ!'

'ಸಾವು! ಸಾವು!'

'ಛಡಿಏಟು! ಛಡಿಏಟು!'

'ದೇವರ ಸರ ಕದ್ದೋನ್ಗೆ!'

'ನರಕ! ನರಕ!

'ಗೋಕುಲದ ದೇವ್ರು.'

'ಜಿಂದಾಬಾದ್!'

'ನವನೀತ ದೇವ್ರು.'

'ಜಿಂದಾಬಾದ್!'

'ಗೋಕುಲ್ದ ಜನರು!'

'ಜಿಂದಾಬಾದ್!'

'ಊರಿನ್ ಸಾವ್ಕಾರ್ರು!'

'ಜಿಂದಾಬಾದ್!'

ಛೀತ್ಕಾರ ಜಯಕಾರಗಳೊಂದಿಗೆ ಮೆರವಣಿಗೆ ನಿಧಾನವಾಗಿ ಗೋಕುಲದ ಕೇರಿಗಳಲ್ಲಿ ಅತ್ಯುತ್ಸಾಹದಿಂದ ಸಾಗುತ್ತಿತ್ತು. ಬಿಸಿಲು ಏರಿದಂತೆ ಮೂಗನ ತಲೆ ಮುಖಗಳಿಂದ ಬೆವರು ಮಸಿ ಎಣ್ಣೆ ಬೆರೆದು ಹರಿದು ಇಳಿದು ತೊಟ್ಟಿಕ್ಕುತ್ತಿದ್ದುವು. ಮೂಗ ಮುಂದೆ ನೋಡುತ್ತ ಸದ್ದಿಲ್ಲದೆ